# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಮಹಾಲಕ್ಷ್ಮಿ ಛೇಂಬರ್ಸ್, 9/2, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು.

## ಪತ್ರಿಕಾ ಪ್ರಕಟಣೆ

## 2014–15ನೇ ಸಾಲಿನ ವಿದ್ಯುಚ್ಛಕ್ತಿ ದರ ಪರಿಷ್ಕರಣಾ ವಿವರಗಳು:

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ 2014–15ನೇ ಸಾಲಿನ ಪರಿಷ್ಕೃತ ವಿದ್ಯುಚ್ಛಕ್ತಿ ದರಗಳನ್ನು ಅನುಮೋದಿಸಿ ಘೋಷಿಸಿದೆ. ಈ ಪರಿಷ್ಕೃತ ದರಗಳು 2014–15ನೇ ಸಾಲಿನಲ್ಲಿ ದಿನಾಂಕ: 1.5.2014 ಅಥವಾ ನಂತರ ಬರುವ ಮೊದಲನೆಯ ಮೀಟರ್ ಓದುವ ದಿನಾಂಕದಿಂದ ಬಳಕೆಯಾಗುವ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತದೆ.

ಆಯೋಗದ ಅನುಮೋದಿತ ದರವು ರಾಜ್ಯದ ವಿವಿಧ ಗ್ರಾಹಕರಿಗೆ(ಕೃಷಿ ಪಂಪ್‌ಸೆಟ್‌ಗಳು ಹಾಗು ಭಾಗ್ಯಜ್ಯೋತಿ/ಕುಠೀರಜ್ಯೋತಿ ಗ್ರಾಹಕರನ್ನು ಹೊರತುಪಡಿಸಿ) ಪ್ರತಿ ಯುನಿಟ್‌ಗೆ 10ಪೈಸೆಯಿಂದ 50 ಪೈಸೆಯವರೆಗೂ ಹೆಚ್ಚಳಗೊಂಡಿದ್ದು ಸರಾಸರಿ ಹೆಚ್ಚಳ ಪ್ರತಿ ಯೂನಿಟ್‌ಗೆ 32 ಪೈಸೆ ಆಗಿರುತ್ತದೆ. ವಿದ್ಯುತ್ ಸರಬರಾಜು ಕಂಪನಿಗಳು ನೀರಾವರಿ ಪಂಪ್ ಸೆಟ್ ಮತ್ತು ಭಾಗ್ಯಜ್ಯೋತಿ/ಕುಟೀರಜ್ಯೋತಿ ಸ್ಥಾವರಗಳನ್ನು ಹೊರತುಪಡಿಸಿ ಎಲ್ಲಾ ಪ್ರವರ್ಗಗಳಿಗೆ ಕೋರಿದ್ದ ಸರಾಸರಿ ಹೆಚ್ಚಳ ಪ್ರತಿ ಯೂನಿಟ್ಟಿಗೆ 66ಪೈಸೆಗೆ ಪ್ರತಿಯಾಗಿ ಈ ಮೇಲಿನ ದರಗಳನ್ನು ಅನುಮೋದಿಸಲಾಗಿದೆ.

## ಗೃಹಬಳಕೆ ಗ್ರಾಹಕರಿಗೆ ಅನ್ವಯವಾಗುವ ದರಗಳು:

ಗೃಹ ಬಳಕೆಯ ಗ್ರಾಹಕರಿಗೆ ಮಾಹೆಯಾನ 30 ಯೂನಿಟ್‌ಗಳವರೆಗೆ ಮೀರದಂತೆ ಬಳಸುವ ಪ್ರತಿ ಯೂನಿಟ್‌ಗೆ ಹೆಚ್ಚಳ 20 ಪೈಸೆಯೆಂದು ನಿಗದಿಪಡಿಸಲಾಗಿದೆ. 30 ಯೂನಿಟ್‌ಗೆ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ 30 ಪೈಸೆಯಷ್ಟು ದರ ಹೆಚ್ಚಳ ನಿಗದಿಪಡಿಸಲಾಗಿದೆ. ನಗರ ಪ್ರದೇಶಗಳಲ್ಲಿನ ಗೃಹ ಬಳಕೆದಾರರಿಗೆ ಮೊದಲ 30 ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.2.70, 31ರಿಂದ 100 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.4.00, 101ರಿಂದ 200 ಯೂನಿಟ್‌ಗಳವರೆಗೆ ಪ್ರತಿ ಯೂನಿಟ್‌ಗೆ ರೂ.5.25 ಹಾಗೂ ಅದಕ್ಕೂ ಹೆಚ್ಚಿನ ಬಳಕೆಗೆ ರೂ.6.25ಗಳ ದರ ನಿಗದಿಪಡಿಸಲಾಗಿದೆ.

ಗ್ರಾಮಾಂತರ ಪ್ರದೇಶದ ಗೃಹ ಬಳಕೆದಾರರಿಗೆ ಮೊದಲ 30 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.2.60, 31ರಿಂದ 100 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.3.70, 101ರಿಂದ 200ಯೂನಿಟ್‌ಗಳ ಬಳಕಗೆ ಪ್ರತಿ ಯೂನಿಟ್‌ಗೆ ರೂ.4.95 ಹಾಗೂ ಅದಕ್ಕಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.75ರಂತೆ ನಿಗದಿಪಡಿಸಲಾಗಿದೆ.

ಹೆಚ್.ಟಿ. ಪ್ರವರ್ಗದಲ್ಲಿ ಬರುವ ವಸತಿ ಸಂಕೀರ್ಣಗಳಿಗೆ (Residential Apartments) ಸೇರಿದ ಬಳಕೆದಾರರಿಗೆ ಪ್ರತಿ ಯೂನಿಟ್‌ಗೆ ದರವನ್ನು ರೂ.4.90ರಿಂದ ರೂ.5.30ಕ್ಕೆ ಹೆಚ್ಚಿಸಲಾಗಿದೆ.

## ವಾಣಿಜ್ಯ ಮತ್ತು ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:

ರಾಜ್ಯದಲ್ಲಿನ ವಾಣಿಜ್ಯ ಮತ್ತು ಕೈಗಾರಿಕಾ ಬಳಕೆದಾರರ ಪ್ರವರ್ಗಗಳಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳನ್ನು ಪ್ರತಿ ಯೂನಿಟ್‌ಗೆ 30 ರಿಂದ 40ಪೈಸೆಯಂತೆ ಹೆಚ್ಚಿಸಲಾಗಿದೆ.

ಬೆಂಗಳೂರು ನಗರ ಪ್ರದೇಶದ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಮೊದಲ 500 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.4.75 (30ಪೈಸೆ ಹೆಚ್ಚಳ) ಹಾಗೂ 500 ಯೂನಿಟ್‌ಗಳಿಗಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.85ರಂತೆ ದರ ನಿಗದಿ ಮಾಡಲಾಗಿದೆ(40ಪೈಸೆ ಹೆಚ್ಚಳ). ಇತರೆ ಪ್ರದೇಶಗಳಲ್ಲಿನ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಮೊದಲ 500 ಯೂನಿಟ್ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.4.55(30ಪೈಸೆ ಹೆಚ್ಚಳ) 501 ಯೂನಿಟ್‌ನಿಂದ 1000 ಯೂನಿಟ್‌ಗಳವರಗೆ ಪ್ರತಿ ಯೂನಿಟ್‌ಗೆ ರೂ.5.35 ಹಾಗೂ 1000 ಯೂನಿಟ್‌ಗಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.65ರಂತೆ ನಿಗದಿಪಡಿಸಲಾಗಿದೆ(40ಪೈಸೆ ಹೆಚ್ಚಳ)

ಬೆಂಗಳೂರು ಮಹಾನಗರ ಪ್ರದೇಶ ಹಾಗೂ ಇತರೆ ಮಹಾನಗರ ಪ್ರದೇಶಗಳಲ್ಲಿನ ಎಲ್.ಟಿ. ವಾಣಿಜ್ಯ ಬಳಕೆದಾರರಿಗೆ ಮೊದಲ 50 ಯೂನಿಟ್‌ಗಳಿಗೆ ರೂ.6.75 ಹಾಗೂ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.75ರಂತೆ ದರ ನಿಗದಿಪಡಿಸಿದೆ. ಗ್ರಾಮಾಂತರ ಪ್ರದೇಶದಲ್ಲಿನ ವಾಣಿಜ್ಯ ಬಳಕೆದಾರರಿಗೆ ಮೊದಲ 50 ಯೂನಿಟ್‌ಗೆ ಪ್ರತಿ ಯೂನಿಟ್‌ಗೆ ರೂ.6.25 ಹಾಗೂ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.25 ನೀಡಬೇಕಾಗುತ್ತದೆ. ಈ ಪ್ರವರ್ಗಗಳಿಗೆ ಅನ್ವಯವಾಗುವ ಹೆಚ್ಚಳ ಪ್ರತಿ ಯೂನಿಟ್‌ಗೆ 30 ಪೈಸೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಮೊದಲ 1 ಲಕ್ಷ ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.75(40ಪೈಸೆ ಹೆಚ್ಚಳ) ಹಾಗೂ ಅದಕ್ಕಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.15ರಂತೆ(40ಪೈಸೆ ಹೆಚ್ಚಳ) ನಿಗದಿಪಡಿಸಿದೆ. ಸಮಾನ ಬಳಕೆಗೆ ಇತರೆ ಪ್ರದೇಶಗಳಲ್ಲಿ ಕ್ರಮವಾಗಿ ಪ್ರತಿ ಯೂನಿಟ್‌ಗೆ ರೂ.5.70 ಹಾಗೂ ರೂ.6.00ರ ದರ ನಿಗದಿಪಡಿಸಿದೆ.(35ಪೈಸೆ ಹೆಚ್ಚಳ)

ಬೆಂಗಳೂರು ಹಾಗೂ ಇತರೆ ಮಹಾನಗರ ಪಾಲಿಕೆ ಪ್ರದೇಶಗಳಲ್ಲಿರುವ ಹೆಚ್.ಟಿ. ವಾಣಿಜ್ಯ ಬಳಕೆದಾರರು ಮೊದಲ 2 ಲಕ್ಷ ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.35 ಹಾಗೂ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.65ರಂತೆ ನಿಗದಿಪಡಿಸಿದೆ. ಸಮಾನ ಬಳಕೆಗೆ ಇತರೆ ಪ್ರದೇಶಗಳಲ್ಲಿ ಕ್ರಮವಾಗಿ ಈ ದರವು ಪ್ರತಿ ಯೂನಿಟ್‌ಗೆ ರೂ.7.15 ಹಾಗೂ ರೂ.7.45 ಎಂದು ನಿಗದಿಪಡಿಸಿದೆ. ಈ ಎಲ್ಲಾ ಪ್ರವರ್ಗಗಳಿಗೆ ಪ್ರತಿ ಯೂನಿಟ್‌ಗೆ 40 ಪೈಸೆ ಹೆಚ್ಚಿಸಲಾಗಿದೆ.

## ಸರ್ಕಾರದ ಸಹಾಯಧನ:

2013–14ನೇ ಸಾಲಿನಲ್ಲಿ 10 ಹೆಚ್.ಪಿ. ಸಾಮರ್ಥ್ಯದ 21.39 ಲಕ್ಷ ಕೃಷಿ ಪಂಪ್‌ಸೆಟ್‌ಗಳಿಗೆ ಹಾಗೂ 22.90 ಲಕ್ಷ ಭಾಗ್ಯಜ್ಯೋತಿ/ಕುಟೀರಜ್ಯೋತಿ ಸಂಪರ್ಕಗಳಿಗಾಗಿ ಆಯೋಗವು ರೂ.5381 ಕೋಟಿ ಸಹಾಯಧನವನ್ನು ನಿಗದಿ ಮಾಡಿತ್ತು ಹಾಗೂ 2014–15ನೆಯ ಸಾಲಿಗೆ ರೂ.6308 ಕೋಟಿಯನ್ನು ನಿಗದಿ ಮಾಡಿದೆ. ಪ್ರಮುಖವಾಗಿ ಸರಾಸರಿ ವಿದ್ಯುಚ್ಛಕ್ತಿ ಖರೀದಿ ದರವು ಪ್ರತಿ ಯುನಿಟ್‌ಗೆ 2013–14ರ ರೂ.3.20ರಿಂದ 2014–15ರಲ್ಲಿ ರೂ.3.59ಕ್ಕೆ ಏರಿಕೆಯಾಗಿರುವುದರ ಪ್ರಯುಕ್ತ ಈ ಹೆಚ್ಚಳವು ಅನಿವಾರ್ಯವಾಗಿದೆ.

## ಕುಡಿಯುವ ನೀರು ಸರಬರಾಜು ಮತ್ತು ಬೀದಿ ದೀಪ:

ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿನ ಕುಡಿಯುವ ನೀರು ಸರಬರಾಜು ಮಾಡುವ ಸ್ಥಾವರಗಳಲ್ಲಿ ಬಳಸಲಾಗುವ ಎಲ್.ಟಿ ವಿದ್ಯುಚ್ಛಕ್ತಿ ದರವನ್ನು ಪ್ರತಿ ಯುನಿಟ್‌ಗೆ 10ಪೈಸೆ ಹಾಗೂ ಹೆಚ್.ಟಿ ವಿದ್ಯುಚ್ಛಕ್ತಿ ದರವನ್ನು ಪ್ರತಿ ಯುನಿಟ್‌ಗೆ 20ಪೈಸೆಯಂತೆ ಆಯೋಗವು ಹೆಚ್ಚಿಸಿದೆ. ಕುಡಿಯುವ ನೀರು ಸರಬರಾಜು ಸ್ಥಾವರಗಳ ಎಲ್.ಟಿ. ಪ್ರವರ್ಗದ ಪರಿಷ್ಕೃತ ದರ ಪ್ರತಿ ಯುನಿಟ್‌ಗೆ ರೂ.3.20ರಿಂದ ರೂ.3.30ಕ್ಕೆ ಹಾಗೂ ಹೆಚ್.ಟಿ ಪ್ರವರ್ಗ ಪ್ರತಿ ಯುನಿಟ್‌ಗೆ ರೂ.3.80ರಿಂದ ರೂ.4.00ಕ್ಕೆ ಹೆಚ್ಚಿಸಿ ನಿಗದಿಪಡಿಸಿದೆ. ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿನ ಬೀದಿ ದೀಪ ಸ್ಥಾವರಗಳಿಗೆ ಅನ್ವಯವಾಗುವ ದರವನ್ನು ಪ್ರತಿ ಯೂನಿಟ್‌ಗೆ ರೂ.4.45ರಿಂದ ರೂ.4.85ಕ್ಕೆ ಹೆಚ್ಚಿಸಲಾಗಿದೆ.

## ವಿದ್ಯಾ ಸಂಸ್ಥೆಗಳು ಹಾಗೂ ಆಸ್ಪತ್ರೆಗಳು:

ಎಲ್.ಟಿ. ಪ್ರವರ್ಗಕ್ಕೆ ಸೇರಿದ ಖಾಸಗಿ ವಿದ್ಯಾಸಂಸ್ಥೆಗಳು ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರವನ್ನು ಪ್ರತಿ ಯೂನಿಟ್‌ಗೆ 30ರಿಂದ 50ಪೈಸೆಗೆ ಹೆಚ್ಚಿಸಲು ಆದೇಶಿಸಿದೆ. ಎಲ್.ಟಿ. ಪ್ರವರ್ಗದಲ್ಲಿರುವ ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಹಾಗೂ ಖಾಸಗಿ ಆಸ್ಪತ್ರೆಗಳಿಗೆ, ಬೆಂಗಳೂರು ಮತ್ತು ಇತರೆ ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ, ಪ್ರಥಮ 200 ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.00 ಹಾಗೂ ಅದಕ್ಕಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ರೂ. 7.20ರಂತೆ ದರ ಅನ್ವಯವಾಗುವುದು, ಇತರೆ ಪ್ರದೇಶಗಳಲ್ಲಿ ಸಮಾನ ಬಳಕೆಗೆ ಪ್ರಸಕ್ತ ದರ ಪ್ರತಿ ಯೂನಿಟ್‌ಗೆ ರೂ.5.50 ಹಾಗೂ ರೂ.6.70 ನಿಗದಿಪಡಿಸಿದೆ.

ಹೆಚ್.ಟಿ ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಖಾಸಗಿ ವಿದ್ಯಾ ಸಂಸ್ಥೆಗಳ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಮೊದಲ 1 ಲಕ್ಷ ಯೂನಿಟ್ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.40 ಹಾಗೂ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.90 ಪಾವತಿಸತಕ್ಕದ್ದು. ಹೆಚ್.ಟಿ.ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಸರ್ಕಾರಿ ಆಸ್ಪತ್ರೆಗಳು, ಚಾರಿಟೆಬಲ್ ಸಂಸ್ಥೆಗಳು ನಡೆಸುವ ಆಸ್ಪತ್ರೆಗಳು ಹಾಗೂ ಸರ್ಕಾರಿ ವಿದ್ಯಾ ಸಂಸ್ಥೆಗಳು ಮತ್ತು ಅನುದಾನಿತ ವಿದ್ಯಾ ಸಂಸ್ಥೆಗಳು ಮೊದಲ 1 ಲಕ್ಷ ಯೂನಿಟ್ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.40 ಹಾಗೂ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.90 ದರ ನಿಗದಿಪಡಿಸಿದೆ.

ಹೆಚ್.ಟಿ. ಕೈಗಾರಿಕಾ ಹಾಗೂ ವಾಣಿಜ್ಯ ಗ್ರಾಹಕರು ತಮ್ಮ ಆಯ್ಕೆಯಂತೆ ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸಲ್ಪಡುವ ವಿದ್ಯುಚ್ಛಕ್ತಿಯನ್ನು ಬಳಸಲು ಅವಕಾಶವಿದ್ದು, ಈ ಪ್ರವರ್ಗಕ್ಕೆ ಅನ್ವಯಿಸುವ ಗ್ರೀನ್ ಟ್ಯಾರೀಫ್(ಹಸಿರು ದರ) ದರವನ್ನು (ವಿದ್ಯುತ್‌ದರದ ಮೇಲೆ ಹೆಚ್ಚುವರಿ) ಪ್ರಸಕ್ತ ಪ್ರತಿ ಯೂನಿಟ್‌ಗೆ 50 ಪೈಸೆಯಂತೆ ಮುಂದುವರಿಸಿ ಆದೇಶಿಸಿದೆ.

## ಇಂಧನ ವೆಚ್ಚ ಮರು ಹೊಂದಾಣಿಕೆ ದರಗಳು:

ಇಂಧನ ವೆಚ್ಚ ಮರುಹೊಂದಾಣಿಕೆ ದರಗಳನ್ನು ಪ್ರತಿ ತ್ರೈಮಾಸಿಕ ನಿಯತಕಾಲಿಕವಾಗಿ 1.7.2013ರಿಂದ ಆಯೋಗವು ನಿಗದಿಪಡಿಸಿ ಪ್ರಕಟಿಸುತ್ತದೆ ಮತ್ತು ಪ್ರತಿ ತ್ರೈಮಾಸಿಕವು ಸಹ ಈ ಸಂಬಂದ ಪ್ರತ್ಯೇಕ ಆದೇಶವನ್ನು ಆಯೋಗದಿಂದ ಹೊರಡಿಸಲಾಗುತ್ತಿದೆ.

## ಅಲ್ಪಾವಧಿ ವಿದ್ಯುತ್ ಖರೀದಿ ದರ ಮಿತಿ ನಿಗದಿ ಪಡಿಸುವಿಕೆ:

ರಾಜ್ಯದಲ್ಲಿನ ವಿದ್ಯುತ್ ಲಭ್ಯತೆಯಲ್ಲಿನ ಅಭಾವದಿಂದಾಗಿ ವಿದ್ಯುತ್ ಸರಬರಾಜು ಕಂಪನಿಗಳು ಅಲ್ಪಾವಧಿ/ಮಧ್ಯಮಾವಧಿ ಖರೀದಿಗೆ ಮುಂದಾಗಿರುವುದನ್ನು ಆಯೋಗವು ಗಮನಿಸಿದೆ.

ಆಯೋಗವು ಈ ಹಿಂದೆ ನಿಗದಿಪಡಿಸಿದ ಪ್ರತಿ ಯೂನಿಟ್ ಅಲ್ಪಾವದಿ/ಮಧ್ಯಮಾವಧಿ ಖರೀದಿ ದರ ಮಿತಿಯನ್ನು ರೂ.4.50ರಂತೆ ಮುಂದುವರಿಸಿ ಆದೇಶಿಸಿದೆ. ಆಯೋಗ ನಿಗದಿಪಡಿಸಿದ ದರ ಮಿತಿಗಿಂತ ಹೆಚ್ಚಿನ ದರದಲ್ಲಿ ಖರೀದಿ ಮಾಡುವ ಸಂದರ್ಭದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಈ ಆಯೋಗದ ಪೂರ್ವಬಾವಿ ಅನುಮೋದನೆ ಪಡೆಯತಕ್ಕದ್ದು.

## ವಿದ್ಯುತ್ ಸರಬರಾಜು ಸಂಸ್ಥೆಗಳ 2014–15 ಸಾಲಿನ ವಾರ್ಷಿಕ ಅಂದಾಜು ಬೇಡಿಕೆ (ARR-FY-15)

ವಿದ್ಯುತ್ ಸರಬರಾಜು ಸಂಸ್ಥೆಗಳು 2014–15ನೇ ಸಾಲಿಗೆ ಸಲ್ಲಿಸಿದ ವಾರ್ಷಿಕ ಕಂದಾಯ ಬೇಡಿಕೆ (**ARR)** ಗಳನ್ನು ಕೂಲಂಕುಷವಾಗಿ ಪರೀಶೀಲಿಸಿದ ಆಯೋಗವು ಒಟ್ಟು ರೂ.27860 ಕೋಟಿ ಅಂದಾಜು ಬೇಡಿಕೆಗೆ ಅನುಮೋದನೆ ನೀಡಿದೆ ಹಾಗೂ 50097 ದಶಲಕ್ಷ ಯೂನಿಟ್‌ಗಳ (ವಿದ್ಯುತ್ ಪ್ರಸರಣ ಮತ್ತು ವಿತರಣಾ ನಷ್ಟ ಶೇ 18.44 ಹೊರತುಪಡಿಸಿ) ಸರಬರಾಜು ಮಾಡಲು ಅನುಮೋದನೆ ನೀಡಿದೆ. ಹಿಂದಿನ ವರ್ಷ 2013–14ರ ಸುಮಾರು 56794 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಖರೀದಿಗೆ ಎದುರಾಗಿ ಪ್ರಸಕ್ತ 2014–15ನೇ ಸಾಲಿನಲ್ಲಿ 61722 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಖರೀದಿಗೆ ಆಯೋಗವು ಅನುಮೋದನೆ ನೀಡಿದೆ. ಒಟ್ಟು ವಿದ್ಯುಚ್ಛಕ್ತಿ ಖರೀದಿಯಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಶೇ:50ಕ್ಕಿಂತ ಹೆಚ್ಚಿನ ಪ್ರಮಾಣದ ವಿದ್ಯುಚ್ಛಕ್ತಿ ಅಂದರೆ 30557 ದಶಲಕ್ಷ ಯೂನಿಟ್‌ಗಳನ್ನು ಬಳಸಲಿದೆ ಹಾಗೂ ಈ ಸಂಸ್ಥೆಯ ವಾರ್ಷಿಕ ಕಂದಾಯ ಬೇಡಿಕೆಯನ್ನು ರೂ. 14213 ಕೋಟಿಯೆಂದು 2014–15ಕ್ಕೆ ನಿಗದಿಪಡಿಸಿದೆ.

## ಇತರೆ ಪ್ರಮುಖ ಅಂಶಗಳು:

ವಿದ್ಯುಚ್ಛಕ್ತಿ ಖರೀದಿ ದರ ಹೆಚ್ಚಳ ಹಾಗೂ ನಿರ್ವಹಣಾ ವೆಚ್ಚಗಳಲ್ಲಿನ ಹೆಚ್ಚಳದ ಹಿನ್ನೆಲೆಯಲ್ಲಿ 2014–15ರ ಪರಿಷ್ಕೃತ ವಾರ್ಷಿಕ ಕಂದಾಯ ಬೇಡಿಕೆಗಳನ್ನು (BESCOM, MESCOM, CESC, HESCOM, & GESCOM) ಸರಬರಾಜು ಕಂಪನಿಗಳು ತಮ್ಮ ದಿನಾಂಕ:13.12.2013ರ ಅರ್ಜಿಯಲ್ಲಿ ಮಂಡಿಸಿದ್ದು ಇವರುಗಳ ಕೋರಿಕೆಗೆ ಎದುರಾಗಿ ಆಯೋಗವು ಅನುಮೋದಿಸಿದ ವಾರ್ಷಿಕ ಕಂದಾಯ ಬೇಡಿಕೆ ವಿವರಗಳು ಈ ಕೆಳಕಂಡಂತಿರುತ್ತದೆ.

ರೂ. ಕೋಟಿಗಳಲ್ಲಿ.

| ವಿದ್ಯುತ್ ಸರಬರಾಜು ಕಂಪನಿ | FY-15 (2014-15) | |
|---|---|---|
| | ಪ್ರಸ್ತಾವಿತ | ಅನುಮೋದಿತ |
| ಬೆಸ್ಕಾಂ | 15650.71 | 14213.19 |

| | | |
|---|---|---|
| ಮೆಸ್ಕಾಂ | 2562.15 | 2312.46 |
| ಸೆಸ್ಕ್ | 3125.66 | 2916.00 |
| ಹೆಸ್ಕಾಂ | 4965.91 | 5063.94 |
| ಜೆಸ್ಕಾಂ | 3655.53 | 3354.86 |
| ಒಟ್ಟು | **29959.96** | **27860.45** |

## ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ 2014–15ಕ್ಕೆ ಅನ್ವಯವಾಗುವ ವಿದ್ಯುತ್ ಪ್ರಸರಣ ದರ ನಿಗದಿ:

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು 2014–15ರ (FY-15) ಸಾಲಿಗಾಗಿ ರೂ.2613.23 ಕೋಟಿ ವಾರ್ಷಿಕ ಕಂದಾಯ ಬೇಡಿಕೆ ಮಂಡಿಸಿದ್ದು ಇದರಲ್ಲಿ 2012–13ನೇ ಸಾಲಿನ (FY-13) ರೂ.249.54ಕೋಟಿ ಕಂದಾಯ ಕೊರತೆ ಸಹಾ ಒಳಗೊಂಡಿರುತ್ತದೆ. ಅರ್ಜಿಯ ವಿವರವಾದ ಪರಿಶೀಲನೆಯ ನಂತರ ಆಯೋಗವು 2014–15ಕ್ಕೆ ರೂ.2196.94 ಕೋಟಿ ವಾರ್ಷಿಕ ಕಂದಾಯ ಬೇಡಿಕೆಯನ್ನು ಅನುಮೋದಿಸಿದೆ ಹಾಗೂ ಪ್ರಸರಣಾ ದರವನ್ನು ಪ್ರತಿ ಮೆಗಾವಾಟ್‌ಗೆ ಪ್ರತಿ ತಿಂಗಳಿಗೆ ರೂ.98324 ಎಂದು ನಿಗದಿಪಡಿಸಿದೆ. ಹಿಂದಿನ ವರ್ಷ 2013–14ರಲ್ಲಿ ಪ್ರಸರಣ ದರವು ಪ್ರತಿ ಮೆಗಾವಾಟ್‌ಗೆ ರೂ.95442/– ಎಂದು ನಿಗದಿಪಡಿಸಲಾಗಿತ್ತು. ವಿದ್ಯುತ್ ಸರಬರಾಜು ಸಂಸ್ಥೆಗಳಿಗೆ ಆಯೋಗ ಅನುಮೋದಿಸಿರುವ ವಿದ್ಯುತ್ ಖರೀದಿ ದರದಲ್ಲಿ ಈ ಮೇಲ್ಕಂಡ ವಿದ್ಯುತ್ ಪ್ರಸರಣ ದರವು ಒಳಗೊಂಡಿದೆ.

*****

**ಟಿಪ್ಪಣಿ:** ಪ್ರತಿ ಬಳಕೆದಾರರ ಪ್ರವರ್ಗಕ್ಕೆ ಸಂಬಂಧಿಸಿದ ಪರಿಷ್ಕೃತ ವಿದ್ಯುತ್ ದರ ವಿವರಗಳನ್ನು ಈ ಪತ್ರಿಕಾ ಪ್ರಕಟಣೆಯೊಂದಿಗೆ ಲಗತ್ತಿಸಿದೆ. ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ ವಾರ್ಷಿಕ ದರ ಪರಿಷ್ಕರಣಾ ಆದೇಶದ ಸಂಪೂರ್ಣ ವಿವರಗಳನ್ನು ಆಯೋಗದ ವೆಬ್‌ಸೈಟ್ www.karnataka.gov.in/kerc ನಲ್ಲಿ ಪ್ರಕಟಿಸಲಾಗಿದೆ